ಮತ್ತು ಕ್ರಮವನ್ನು ನಾಳೆ ಅಧಿವೇಶನ ಪ್ರಾರಂಭವಾದ ತಕ್ಷಣ ಸರ್ಕಾರ ಉತ್ತರ ಕೊಡುತ್ತದೆ.

(8) ವಿಷಯ: ಇಡೀ ರಾಜ್ಯದಲ್ಲಿ APMC ಬಂದ್ ಮಾಡಿರುವುದರಿಂದ ರಾಜ್ಯದ ಜನರಿಗೆ ತೊಂದರೆಯಾಗಿರುವ ಬಗ್ಗೆ.

ಶ್ರೀ ವಾಟಾಳ್ ನಾಗರಾಜ್(ಚಾಮರಾಜನಗರ): ಮಾನ್ಯ ಅಧ್ಯಕ್ಷರೆ, ಸುಮಾರು ಐದು ದಿವಸಗಳಿಂದ APMC ಯವರು ಇಡೀ ರಾಜ್ಯದಲ್ಲಿ ಸಂಪೂರ್ಣವಾಗಿ ಬಂದ್ ಮಾಡಿದ್ದಾರೆ. ನಮ್ಮ ಈ ಸದನ ಏನು ಮಸೂದೆಯನ್ನು ತಂದಿತ್ತು, ಈ ಮಸೂದೆಯಿಂದ ರೈತರ ಹಿತಕ್ಕೆ ಭಂಗವಾಗಿದೆ. ಇವತ್ತು APMC ಗಳಿಗೆ ಭಂಗವಾಗಿದೆ. ಇಡೀ ರಾಜ್ಯದಾದ್ಯಂತ ಎಲ್ಲರೂ ಸಂಪೂರ್ಣವಾಗಿ ಬಂದ್ ಆಚರಣೆ ಮಾಡಿದ್ದಾರೆ. ಬಂದ್‌ನಿಂದ ವ್ಯಾಪಾರಸ್ಥರಿಗೆ ತೊಂದರೆಯಾಗಿದೆ. 15,000ಕ್ಕೂ ಹೆಚ್ಚು ಕೆಲಸಗಾರರು ಬೀದಿ ಪಾಲಾಗಿದ್ದಾರೆ. ಎಲ್ಲಕ್ಕಿಂತ ಹೆಚ್ಚಾಗಿ ತರಕಾರಿ ಬೆಲೆ, ಹಣ್ಣಿನ ಬೆಲೆ ಎಲ್ಲಾ ರೀತಿಯ ಬೆಲೆಗಳು ಹೆಚ್ಚಾಗಿವೆ. ಇದರ ಬಗ್ಗೆ ಸರ್ಕಾರ ಏನೂ ಗಮನ ಕೊಟ್ಟಿಲ್ಲ. ಐದು ದಿವಸಗಳಿಂದ ಮುಷ್ಕರ ನಡೆಯುತ್ತಿದೆ. ಅವರನ್ನು ಕರೆದು ಮಾತುಕತೆ ಮಾಡಬೇಕು, ಕರೆಯಬೇಕು, ಅವರ ಮುಂದಿನ ಮಾರ್ಗ ಏನು? ಏನು ಮಾಡುತ್ತಾರೆಂದು ಅವರು ಹೇಳಲಿಲ್ಲ. ಅವರ ಬಗ್ಗೆ ವಿಚಾರವೇ ಇಲ್ಲ. ಯಾರನ್ನೂ ಕರೆದಿಲ್ಲ. ಮಾತುಕತೆ ಆಡಿಲ್ಲ, ಇಡೀ ರಾಜ್ಯದಲ್ಲಿ ಸರ್ಕಾರವೇ ಒಂದು ರೀತಿ, APMC ಒಂದು ರೀತಿ, ಒಂದು ಕಡೆ ಮರಳು ಲಾರಿಗಳ ಸತ್ಯಾಗ್ರಹ, ಏನಿದು? ಸರ್ಕಾರ ಇದೆಯೇ, ಏನಾಗಿದೆ, ಮಾನ್ಯ ಮುಖ್ಯ ಮಂತ್ರಿಗಳು ದೆಹಲಿಗೆ ಹೋಗಿದ್ದಾರೆ, ಸಂಬಂಧಪಟ್ಟ ಸಚಿವರು ಇಲ್ಲಿ ಇಲ್ಲ. ಏನೋ ಒಂದು ತರಹ ಬೇಜವಾಬ್ದಾರಿಯಿಂದ ನಡೆದುಕೊಳ್ಳುತ್ತಿದ್ದಾರೆ. ದಯಮಾಡಿ ಇದರ ಬಗ್ಗೆ ಹೇಳುವುದಕ್ಕೆ ಸರ್ಕಾರದವರು ಯಾರಿದ್ದಾರೆ? ಬಂದನ್ನು ನಿಲ್ಲಿಸಿ ಸರ್ಕಾರ ಅವರನ್ನು ಕರೆದು ಮಾತುಕತೆ ಮಾಡಬೇಕು.

ಅಧ್ಯಕ್ಷರು: ಇದರ ಬಗ್ಗೆ ಯಾರು ಉತ್ತರ ಕೊಡುತ್ತೀರಿ? APMC ಮುಷ್ಕರದ ಬಗ್ಗೆ ಯಾರಾದರೂ ಉತ್ತರ ಕೊಡಿ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಮಾನ್ಯ ವಾಟಾಳ್ ನಾಗರಾಜ್‌ರವರು ಏನು ಹೇಳಿದರು ಎಂದು ಯಾರೂ ಗಮನಿಸಲಿಲ್ಲ.

ಶ್ರೀ ಬಿ.ಎಸ್.ಹೊರಟ್ಟಿ: ಮಾನ್ಯ ಅಧ್ಯಕ್ಷರೆ, APMC ಮುಷ್ಕರದಿಂದ ಏನು ರಾಜ್ಯದಾದ್ಯಂತ ತರಕಾರಿ ಮತ್ತು ಕಾಯಿ ಪಲ್ಯಗಳು ಸಿಗದೆ ತೊಂದರೆಯಾಗಿರುವ ಬಗ್ಗೆ ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳಿದರು. ಇದನ್ನು ಸಂಬಂಧಪಟ್ಟ ಸಚಿವರ ಗಮನಕ್ಕೆ ತಂದು ಉತ್ತರ ಕೊಡಿಸುವಂತಹ ಭರವಸೆಯನ್ನು ಕೊಡುತ್ತೇನೆ.

(ಗೊಂದಲ)

ಅಧ್ಯಕ್ಷರು: ನಾನು ಚರ್ಚೆಗೆ ಅವಕಾಶ ಕೊಡುವುದಿಲ್ಲ. ಮಾನ್ಯ ಹೊರಟ್ಟಿಯವರೇ ನಾಳೆ ಸಂಬಂಧಪಟ್ಟ ಸಚಿವರಿಂದ ವಿವರವಾದ ಉತ್ತರವನ್ನು ಕೊಡಿಸಿ. ಸರ್ಕಾರ ಗಂಭೀರವಾಗಿ ತೆಗೆದುಕೊಳ್ಳಬೇಕು. ಗಂಭೀರವಾಗಿ ತೆಗೆದುಕೊಂಡು ಈ ಸದನಕ್ಕೆ ಬಂದು ಸರಿಯಾದ ರೀತಿಯಲ್ಲಿ ಉತ್ತರವನ್ನು ಕೊಡಬೇಕು, ಸರಿಯಾದ ರೀತಿಯಲ್ಲಿ ಕ್ರಮ ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ಪ್ರಯೋಜನವಿಲ್ಲ. ಇಬ್ಬರು ಸಂಬಂಧಪಟ್ಟ ಸಚಿವರಿಗೆ ಕರೆಸಿ.

ಶ್ರೀ ಜೆ.ಸಿ.ಮಾಧುಸ್ವಾಮಿ: ರಾಜ್ಯದಲ್ಲಿ ಯಾವುದೇ ತರಕಾರಿ ಸಿಗುತ್ತಿಲ್ಲ. ಐದು ದಿವಸಗಳಾದವು. APMC Act amend ಮಾಡಿ ಕೊಟ್ಟಿದ್ದರ ಹಣೆಬರಹ ಇದು. ಏನಾದರೂ ವ್ಯವಸ್ಥೆ ಮಾಡಬೇಕಾ?

ಶ್ರೀ ಬಿ.ಎಸ್. ಹೊರಟ್ಟಿ: ಮಾನ್ಯ ಮಾಧುಸ್ವಾಮಿಯವರೇ, ಸಂಬಂಧಪಟ್ಟವರೆಲ್ಲರೂ ಇದರ ಬಗ್ಗೆ ಕ್ರಮ ತೆಗೆದುಕೊಂಡಿದ್ದಾರೆ. ಇವತ್ತು ಮಧ್ಯಾಹ್ನದ ಮೇಲೆಯೇ ಉತ್ತರ ಕೊಡಿಸುತ್ತೇವೆ.

ಅಧ್ಯಕ್ಷರು: ಏನು ಕ್ರಮ ತೆಗೆದುಕೊಂಡಿದ್ದೀರಿ ಎನ್ನುವುದರ ಬಗ್ಗೆ ಇವತ್ತು ಮಧ್ಯಾಹ್ನದ ಮೇಲೆಯೇ ಒಂದು statement ಕೊಡಿಸಿ.

ಶ್ರೀ ಜೆ.ಸಿ.ಮಾಧುಸ್ವಾಮಿ: ಮಾನ್ಯ ಅಧ್ಯಕ್ಷರೆ, ಎಳ್ಳು, ಹೆಸರು ಮತ್ತು ಉದ್ದಿನ ಕಾಳುಗಳನ್ನು ರೈತರು ಇಟ್ಟುಕೊಳ್ಳುವುದಕ್ಕೆ ಬರುವುದಿಲ್ಲ. ಅವರು ಯಾರಿಗೆ ಮಾರಬೇಕು ಹೇಳಿ.

ಶ್ರೀ ಬಿ.ಎಸ್.ಹೊರಟ್ಟಿ: ಉತ್ತರ ಹೇಳುವುದಕ್ಕಾದರೂ ನೀವು ಸಮಯ ಕೊಡಬೇಕಲ್ಲಾ?

(ಈ ಹಂತದಲ್ಲಿ ಮಾನ್ಯ ಜೆ.ಸಿ.ಮಾಧುಸ್ವಾಮಿಯವರು, ಮಾನ್ಯ ವಾಟಾಳ್ ನಾಗರಾಜ್‌ರವರು, ಮಾನ್ಯ ಜಿ.ವಿ.ಶ್ರೀರಾಮರೆಡ್ಡಿಯವರು, ಮಾನ್ಯ ಎಸ್.ರಾಜೇಂದ್ರನ್‌ರವರು, ಮತ್ತು ಮಾನ್ಯ ಜಯಪ್ರಕಾಶ ಹೆಗ್ಡೆಯವರು ಸಭಾತ್ಯಾಗ ಮಾಡಿದರು.)

ಅಧ್ಯಕ್ಷರು: ಶೂನ್ಯ ವೇಳೆಯಲ್ಲಿ ಮತ್ತೆ ಮತ್ತೆ ಪ್ರಸ್ತಾಪ ಮಾಡುವುದಕ್ಕೆ ಅವಕಾಶವಿಲ್ಲ. ನೀವು ಚರ್ಚೆ ಮಾಡಿದ ಹಾಗೆ ಮಾಡುತ್ತಿದ್ದೀರಿ ದಯಮಾಡಿ ಕುಳಿತುಕೊಳ್ಳಿ. ಮಧ್ಯಾಹ್ನ ಅವರು statement ಮಾಡಿಸುತ್ತೇನೆಂದು ಹೇಳಿದ್ದಾರೆ. ದಯಮಾಡಿ ಕುಳಿತುಕೊಳ್ಳಿ.

(9) ವಿಷಯ: ಸಂಪೂರ್ಣ ಸಾರಾಯಿ ನಿಷೇಧ ಕುರಿತು.

ಶ್ರೀ ಸಿ.ಟಿ.ರವಿ (ಚಿಕ್ಕಮಗಳೂರು): ಮಾನ್ಯ ಅಧ್ಯಕ್ಷರೆ, ಜುಲೈ ಒಂದನೇ ತಾರೀಖಿನಿಂದ ಜಾರಿಗೆ ಬರುವಂತೆ ರಾಜ್ಯದಲ್ಲಿ ಸಂಪೂರ್ಣವಾಗಿ ಸಾರಾಯಿ ನಿಷೇಧ ಮಾಡಿರತಕ್ಕಂತಹ ಕ್ರಮವನ್ನು ನಾವೆಲ್ಲಾ ಸ್ವಾಗತಿಸಿದ್ದೇವೆ. ಆದರೆ ಅದು ಅನುಷ್ಠಾನಕ್ಕೆ ಬಂದಿದೆಯಾ? ನಿನ್ನೆ ನಾನು ನನ್ನ ಕ್ಷೇತ್ರದ ತಾಂಡೆ ಹೋಬಳಿಗೆ ಹೋಗಿದ್ದೆ. ಸಾರಾಯಿ ಪ್ಯಾಕೇಟ್‌ಗಳು ಊರುಗಳಲ್ಲಿ ಮೊದಲು ಬರೀ ವೆಂಡರ್ ಶಾಪ್‌ನಲ್ಲಿ ಸಿಗುತ್ತಿದ್ದವು. ಈಗ ಊರು ಊರಿನಲ್ಲಿ ಸಿಗುತ್ತಿವೆ.

(ಸಾರಾಯಿ ಪ್ಯಾಕೇಟುಗಳನ್ನು ಪ್ರದರ್ಶನ ಮಾಡಿದರು)

ಅಧ್ಯಕ್ಷರು: ಸಾರಾಯಿನಾ ಅದು? ಸಾರಾಯಿನ ಇಲ್ಲಿಗೇಕೆ ತೆಗೆದುಕೊಂಡು ಬಂದಿರಿ? ಅದನ್ನು ನನಗೆ ಕಳುಹಿಸಿ ಕೊಡಿ. ಅದನ್ನು test ಮಾಡಿಸಿ ಅಸಲಿಯೋ ನಕಲಿಯೋ ಎಂದು ನೋಡುತ್ತೇನೆ. ನನ್ನ ಛೇಂಬರ್‌ನಲ್ಲಿ ಕೊಡಿ. ಅವರು ಏನೋ ಪ್ರಸ್ತಾಪ ಮಾಡುತ್ತಿದ್ದಾರೆ ಕೇಳಿ. ಅವರಿಗೆ ಪ್ರಸ್ತಾಪ ಮಾಡುವುದಿಕ್ಕೇ ಬಿಡುತ್ತಿಲ್ಲ.

(ಗೊಂದಲ)

ಶ್ರೀ ಸಿ.ಟಿ.ರವಿ: ಮಾನ್ಯ ಅಧ್ಯಕ್ಷರೆ, ಸಾರಾಯಿ ಪ್ಯಾಕೆಟ್‌ಗಳು ಮೊದಲು ವೆಂಡರ್ ಶಾಪ್‌ಗಳಲ್ಲಿ ಮಾತ್ರ ಸಿಗುತ್ತಿದ್ದವು. ಈಗ ಗೂಡು ಅಂಗಡಿಯಲ್ಲಿಯೂ ಸಿಗುತ್ತವೆ, ಶಾಲೆ ಬಿಟ್ಟಾಗ ಮಕ್ಕಳು ತಮ್ಮ ಜೇಬುಗಳಲ್ಲಿ